ಇ) ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಹಣ ಪಾವತಿಸುವಲ್ಲಿ ವಿಳಂಬವಾಗಿರುವುದಿಲ್ಲ. ಸರ್ಕಾರವು ಈ ಕಾಮಗಾರಿಗಳಿಗಾಗಿ ಸಾಕಷ್ಟು ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. ಯಾವಾಗ ಅನುಷ್ಠಾನ ಏಜೆನ್ಸಿಗಳು ಬಿಲ್‌ಗಳನ್ನು ಸಲ್ಲಿಸುತ್ತವೆಯೋ, ಆಗ ಜಿಲ್ಲಾಧಿಕಾರಿಗಳು ಉಪ ವಿಭಾಗಾಧಿಕಾರಿಗಳಿಂದ ಪರಿಶೀಲನಾ ವರದಿ ಪಡೆದು ಹಣವನ್ನು ಪಾವತಿ ಮಾಡುತ್ತಾರೆ.

ತೀರ್ಥಹಳ್ಳಿ ತಾಲ್ಲೂಕಿನ ದೇವಸ್ಥಾನಗಳಿಂದ ಬರತಕ್ಕ ಆದಾಯ.

2528(2182)ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಕಳೆದ ಮೂರು ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಹಣಗೆರೆ ಭೂತರಾಯಸ್ವಾಮಿ ಮತ್ತು ದರ್ಗಾದಿಂದ ಕಳೆದ 5 ವರ್ಷಗಳಿಂದ ಸಂದಾಯವಾದ ಆದಾಯ ಎಷ್ಟು?

2) ಈ ಹಣವನ್ನು ಎಲ್ಲಿ ಇಡಲಾಗಿದೆ.

3) ಈ ಕ್ಷೇತ್ರದ ಆಡಳಿತ ಮುಜರಾಯಿ ಇಲಾಖೆಗೆ ಎಂದಿನಿಂದ ಒಳಪಟ್ಟಿದೆ.

4) ಇತ್ತೀಚೆಗೆ ವಕ್ಫ್ ಇಲಾಖೆಗೆ ಸೇರಿಸಿಕೊಂಡು ಆದೇಶ ಹೊರಡಿಸಿದ್ದು, ನಿಜವೇ ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ರಾಜ್ಯ ಸಚಿವರು) :—

1) ಈ ಸಂಸ್ಥೆಯ ಕಳೆದ 5 ವರ್ಷಗಳ ಆದಾಯದ ವಿವರ ಈ ಕೆಳಕಂಡಂತಿದೆ.

1994-95	ರೂ.2,24,238-00
1995-96	ರೂ.4,68,838-00
1996-97	ರೂ.4,79,289-00
1997-98	ರೂ.6,65,510-00
1998-99	ರೂ.6,26,562-00

2) ಈ ಸಂಸ್ಥೆಯ ಹಣವನ್ನು ಕೆಳಕಂಡ ಬ್ಯಾಂಕ್‌ಗಳಲ್ಲಿ ಇಡಲಾಗಿದೆ.

1) ಸಯ್ಯಾದ್ರಿ ಬ್ಯಾಂಕ್ ಕನ್ನಂಗಿ ಗ್ರಾಮ, ತೀರ್ಥಹಳ್ಳಿ ತಾಲ್ಲೂಕು.

2) ಕೆನರಾ ಬ್ಯಾಂಕ್ ತೀರ್ಥಹಳ್ಳಿ ಟೌನ್, 3) ವಿಜಯ ಬ್ಯಾಂಕ್ ತೀರ್ಥಹಳ್ಳಿ ಟೌನ್,

4) ಪ್ರಧಾನ ಅಂಚೆ ಕಛೇರಿ, ತೀರ್ಥಹಳ್ಳಿ ಟೌನ್,